File No.DPARAR/65/AAR/2020-DPARAR_TRG-DPAR AR SEC

**ಕರ್ನಾಟಕ ಸರ್ಕಾರ**

**ಸಂಖ್ಯೆ**:ಸಿಆಸುಇ(ಆಸು) 65 ಇಆಸು 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಕೊ.ಸಂ. 609, 6ನೇ ಮಹಡಿ, 1ನೇ ಹಂತ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:02-09-2020.

**ಸುತ್ತೋಲೆ**

ವಿಷಯ: ರಾಜ್ಯ ಸರ್ಕಾರದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ನಾಮನಿರ್ದೇಶನಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 105 ಇಆಸು 2011, ದಿನಾಂಕ:20-11-2012.
2. ತಿದ್ದುಪಡಿ ಆದೇಶ ಸಂಖ್ಯೆ:ಸಿಆಸುಇ 105 ಇಆಸು 2011, ದಿನಾಂಕ:15-04-2013.
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ(ಆಸು) 104 ಇಆಸು 2019, ದಿನಾಂಕ:07-12-2019.

***

ರಾಜ್ಯ ಸರ್ಕಾರದ ಅಧಿಕಾರಿ/ನೌಕರರಿಗೆ "ಸರ್ವೋತ್ತಮ ಸೇವಾ ಪ್ರಶಸ್ತಿ" ನೀಡುವ ಯೋಜನೆಯನ್ನು 2012 ರಿಂದ ಜಾರಿಗೆ ತರಲಾಗಿದೆ. ಪ್ರಸ್ತುತ 2020-21ನೇ ಸಾಲಿನಲ್ಲಿ **ರಾಜ್ಯ ಮಟ್ಟ, ಇಲಾಖಾ ಮಟ್ಟ ಮತ್ತು ಜಿಲ್ಲಾ ಮಟ್ಟದ "ಸರ್ವೋತ್ತಮ ಸೇವಾ ಪ್ರಶಸ್ತಿ"** ಪಡೆಯಲು ರಾಜ್ಯ ಸರ್ಕಾರದ ಅಧಿಕಾರಿ/ನೌಕರರು ತಮ್ಮ ನಾಮ ನಿರ್ದೇಶನಗಳನ್ನು **ಆನ್‌ಲೈನ್ ಮೂಲಕ ಮಾತ್ರ** ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

"ಸರ್ವೋತ್ತಮ ಸೇವಾ ಪ್ರಶಸ್ತಿಯ" ಮೂರು ಹಂತದ ಪ್ರಶಸ್ತಿಗಳಿಗೂ ಅರ್ಜಿ ಸಲ್ಲಿಸಬಯಸುವವರು, **ಪ್ರತಿ ಹಂತಕ್ಕೂ ಪ್ರತ್ಯೇಕವಾಗಿ** ತಮ್ಮ ನಾಮ ನಿರ್ದೇಶನವನ್ನು ಸಲ್ಲಿಸತಕ್ಕದ್ದು.

ನಾಮನಿರ್ದೇಶನವನ್ನು ಸಲ್ಲಿಸಬಯಸುವವರು ಜಾಲತಾಣ **https://dparar.karnataka.gov.in/** ಅಥವಾ **https://sarvothamaawards.karnataka.gov.in/** ದ ಮೂಲಕ **31ನೇ ಅಕ್ಟೋಬರ್ 2020 ರೊಳಗಾಗಿ** ಸಲ್ಲಿಸುವುದು. ಉಲ್ಲೇಖಿತ ಆದೇಶದ ಪ್ರತಿಗಳನ್ನು ಜಾಲತಾಣ **https://dparar.karnataka.gov.in/** ರ ಸರ್ಕಾರದ ಆದೇಶಗಳು ⇨ ತರಬೇತಿ ಇಲ್ಲಿ ಅವಲೋಕಿಸಬಹುದಾಗಿದೆ.

| ಕ್ರಮ ಸಂಖ್ಯೆ | ಪ್ರಶಸ್ತಿ ವಿವರ | ಪ್ರಶಸ್ತಿಗಳ ಸಂಖ್ಯೆ | ಪ್ರತಿ ಪ್ರಶಸ್ತಿವಾರು ಮೊತ್ತ (ರೂ.) |
|---|---|---|---|
| 1 | ಜಿಲ್ಲಾ ಮಟ್ಟ (30 ಜಿಲ್ಲೆX10 ಪ್ರಶಸ್ತಿ) | 300 | 10,000.00 |
| 2 | ಇಲಾಖಾವಾರು (ಪ್ರತಿ ಇಲಾಖೆಗೆ 1 ರಂತೆ) | 30 | 15,000.00 |
| 3 | ರಾಜ್ಯ ಮಟ್ಟ | 10 | 25,000.00 |

ಜಾಲತಾಣದಲ್ಲಿ ಮಾಹಿತಿ/ವಿವರಗಳನ್ನು ದಾಖಲಿಸಲು ಯಾವುದೇ ರೀತಿಯ ಅಡಚಣೆ/ಸಂದೇಹ ಉಂಟಾದಲ್ಲಿ ಹೆಚ್ಚಿನ ಮಾಹಿತಿಗಾಗಿ Help desk ಗೆ ದೂರವಾಣಿ ಮೂಲಕ ಕೆಳಕಂಡವರನ್ನು ಸಂಪರ್ಕಿಸುವುದು.

ಶ್ರೀ ಚೇತನ್
ಮೊ ನಂ: 9164500669
ದೂ:080-22230060
ಇ-ಮೇಲ್ ವಿಳಾಸ: developer-2.webportal@karnataka.gov.in & pm-impl.eoffice@karnataka.gov.in
(ಕಚೇರಿ ವೇಳೆಯಲ್ಲಿ ಮಾತ್ರ ಸಂಪರ್ಕಿಸುವುದು).

(ಬಿ.ಎಸ್. ರವಿಕುಮಾರ್) 2/9/2020
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ-ತರಬೇತಿ)
ದೂ:080-22032655-2654.

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರಿಗೆ.
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
3. ಎಲ್ಲಾ ಜಿಲ್ಲಾಧಿಕಾರಿಯವರಿಗೆ.
4. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ.
5. ಕಚೇರಿ ಪ್ರತಿ/ಹೆಚ್ಚುವರಿ ಪ್ರತಿ

ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ